# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 451 |
| 2 | ಸದಸ್ಯರ ಹೆಸರು | ಶ್ರೀಮತಿ ಭಾರತಿ ಶೆಟ್ಟಿ<br>(ನಾಮ ನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | 18-02-2022 |
| 4 | ಉತ್ತರಿಸುವವರು | ಮಾನ್ಯ ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

| | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ರೈತರಿಗೆ ಅನ್ಯಾಯ-ಶೋಷಣೆಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಬಂದಿದ್ದಲ್ಲಿ ವಿವರ ಒದಗಿಸುವುದು) | ರೇಷ್ಮೆಗೂಡಿನ ಮಾರುಕಟ್ಟೆಯಲ್ಲಿ ರೈತರಿಗೆ ಅನ್ಯಾಯ-ಶೋಷಣೆಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ದಿನಾಂಕ 12-01-2022 ರಂದು ರಾಮನಗರ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ಗೂಡಿನ ವಹಿವಾಟಿಗೆ ಬಂದಿದ್ದ ಶ್ರೀ ವಿರೂಪಾಕ್ಷಪ್ಪ, ಹಾವೇರಿ ಜಿಲ್ಲೆ ರವರು ಮಾರಾಟಕ್ಕೆ ತಂದಿದ್ದ ದ್ವಿತಳಿ ರೇಷ್ಮೆ ಗೂಡನ್ನು ಒಂದು ಜಾಲರಿಯಿಂದ ಮತ್ತೊಂದು ಜಾಲರಿಗೆ ವರ್ಗಾಯಿಸುವುದರಿಂದ ಗೂಡಿನ ಗುಣಮಟ್ಟ ಕಳಪೆಯಾಗುವುದಾಗಿ ಸದರಿ ರೇಷ್ಮೆ ಬೆಳೆಗಾರರು ಆಕ್ಷೇಪಿಸಿದಾಗ ಹರಾಜಿನಲ್ಲಿ ಸದರಿ ಗೂಡನ್ನು ಖರೀದಿಸಿದ ಶ್ರೀ.ಮುನೀರ್ ಅಹಮದ್ ಬಿನ್ ಗಫಾರ್ ಎಂಬ ರೀಲರ್ ಮತ್ತು ಆತನ ಸಹಚರರು ಬೆಳೆಗಾರನ ಮೇಲೆ ಅವಾಚ್ಯ ಶಬ್ಧಗಳಿಂದ ನಿಂದಿಸಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರವಾಗಿರುತ್ತದೆ. ಶ್ರೀ ವಿರೂಪಾಕ್ಷಪ್ಪ, ಹಾವೇರಿ ಜಿಲ್ಲೆ ರವರ ಮೇಲೆ ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸ್ ಮೊಕದ್ದಮೆ ದಾಖಲಿಸಲಾಗಿದೆ. |
| ಆ | ಇಂತಹ ಅನ್ಯಾಯ - ಶೋಷಣೆಗಳನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಪ್ರಸ್ತುತ ರಾಮನಗರ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ರೇಷ್ಮೆ ಬೆಳೆಗಾರರು ಮತ್ತು ನೂಲು ಬಿಚ್ಚಾಣಿಕಾದಾರರ ಸಮನ್ವಯ ನಡೆಸಿ ಸೌಹರ್ದದಿಂದ ವಹಿವಾಟು ನಡೆಸಲು ಭಾಗೀದಾರರಿಗೆ ತಿಳಿಸಿದೆ ಹಾಗೂ ಇಂತಹ ಸಮನ್ವಯ ಸಭೆಗಳನ್ನು ಕಾಲಕಾಲಕ್ಕೆ ನಡೆಸಲು ಮಾರುಕಟ್ಟೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.<br>ರೈತರ ಮೇಲೆ ದೌರ್ಜನ್ಯ ಎಸಗಿರುವ ರೀಲರ್ ಮೇಲೆ ರಾಮನಗರದ ಐಜೂರು ಪೋಲಿಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಾಗಿದೆ. ರೇಷ್ಮೆ ಗೂಡಿನ ವಹಿವಾಟಿನ ಸಮಯದಲ್ಲಿ ಪೋಲಿಸ್ ಇಲಾಖೆಯಿಂದ ಪಹರೆ ವ್ಯವಸ್ಥೆ ಮಾಡಲಾಗಿದೆ.<br>ರೈತರ ಮೇಲೆ ದೌರ್ಜನ್ಯವೆಸಗಿಸಿದ ರೀಲರ್‌ನ್ನು ಹರಾಜಿನಲ್ಲಿ ಭಾಗವಹಿಸದಂತೆ ನಿರ್ಬಂಧಿಸಲಾಗಿದ್ದು, ಅವರ ಲೈಸನ್ಸ್ ರದ್ದುಗೊಳಿಸಲು ಕ್ರಮವಹಿಸಲಾಗಿದೆ.<br>ಇಂತಹ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರ ವಹಿಸಲು ಸಂಬಂಧಿಸಿದ ಅಧಿಕಾರಿ/ ಸಿಬ್ಬಂದಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದೆ. ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಅನ್ಯಾಯ - ಶೋಷಣೆಗಳು ನಡೆಯದಂತೆ ಸಿಸಿಟಿವಿಗಳನ್ನು ಅಳವಡಿಸಿ ನಿಗಾವಹಿಸಲಾಗುತ್ತಿದೆ. |

| | | |
|---|---|---|
| ಇ | ಸರ್ಕಾರ ಸ್ಥಾಪಿಸಲು ಉದ್ದೇಶಿಸಿರುವ ಮಾರುಕಟ್ಟೆಗಳಲ್ಲಿ ಇಂತಹ ಅನ್ಯಾಯ ಶೋಷಣೆ ತಡೆಗಟ್ಟಲು ರೂಪಿಸಿರುವ ಕ್ರಮಗಳೇನು ? | ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಗೂಡು ವಹಿವಾಟಿನ ಅನುಗುಣವಾಗಿ ರೈತರಿಗೆ ಅನ್ಯಾಯ ಶೋಷಣೆಗಳನ್ನು ತಡೆಗಟ್ಟಲು ಎಲ್ಲಾ ಅಗತ್ಯವಾದ ಕ್ರಮಗಳನ್ನು ಸರ್ಕಾರ ಕಾಲಕಾಲಕ್ಕೆ ತೆಗೆದುಕೊಳ್ಳುತ್ತಿದೆ.<br>• ಮಾರುಕಟ್ಟೆಗಳಲ್ಲಿ CCTV ಅಳವಡಿಸಲಾಗಿದೆ.<br>• ರಾಜ್ಯದಲ್ಲಿ ಅತಿ ಹೆಚ್ಚು ರೇಷ್ಮೆ ಗೂಡು ವಹಿವಾಟಾಗುವ ರಾಮನಗರ ಮತ್ತು ಶಿಡ್ಲಘಟ್ಟ ಮಾರುಕಟ್ಟೆಗಳಲ್ಲಿ ದಿನನಿತ್ಯ ಪೋಲೀಸ್ ಪಹರೆ ಹಾಕಲು ಸಂಬಂಧಿಸಿದ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚಿಸಿದೆ ಹಾಗೂ ಈ ಸ್ಥಳಗಳಲ್ಲಿ ಹೊರಠಾಣೆ ಸ್ಥಾಪಿಸಲು ಕೋರಲಾಗಿದೆ.<br>• ಮಾರುಕಟ್ಟೆಗಳಲ್ಲಿ ಖಾಸಗಿ ಭದ್ರತಾ ಸಿಬ್ಬಂದಿಗೆ ಬದಲಾಗಿ ಗೃಹರಕ್ಷಕರನ್ನು ನೇಮಿಸಿಕೊಳ್ಳಲು ಕ್ರಮವಹಿಸಲಾಗಿದೆ.<br>• ರೇಷ್ಮೆ ಗೂಡು ಬಹಿರಂಗ ಹರಾಜು ಬದಲು ಪಾರದರ್ಶಕತೆಯನ್ನು ತರಲು ಮತ್ತು ರೇಷ್ಮೆ ಬೆಳೆಗಾರರಿಗೆ ಸ್ಪರ್ಧಾತ್ಮಕ ಧಾರಣೆಗಾಗಿ 12 ಮಾರುಕಟ್ಟೆಗಳಲ್ಲಿ ಇ-ಹರಾಜು ವಿಧಾನವನ್ನು ಅಳವಡಿಸಲಾಗಿದೆ.<br>• ತೂಕದಲ್ಲಿ ಪಾರದರ್ಶಕತೆಯನ್ನು ತರಲು ಇ-ಹರಾಜು ವ್ಯವಸ್ಥೆಗೆ ತೂಕದ ಯಂತ್ರಗಳನ್ನು ಅನುಸಂಧಾನಗೊಳಿಸಲಾಗಿದೆ.<br>• ರೇಷ್ಮೆ ಬೆಳೆಗಾರರಿಗೆ ಗೂಡಿನ ಮೌಲ್ಯವನ್ನು ಅವರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲು ಇ-ಹಣ ಪಾವತಿಯನ್ನು HDFC BANK ಸಹಯೋಗದಲ್ಲಿ ಕ್ರಮವಹಿಸಲಾಗುತ್ತಿದ್ದು, ಈಗಾಗಲೇ ಶಿಡ್ಲಘಟ್ಟ, ವಿಜಯಪುರ, ಕೋಲಾರ ಮಾರುಕಟ್ಟೆಗಳಲ್ಲಿ ಇ-ಹಣ ಪಾವತಿಯನ್ನು ಜಾರಿಗೊಳಿಸಲಾಗಿದೆ. ಕೊಳ್ಳೇಗಾಲ, ಕನಕಪುರ, ಚನ್ನಪಟ್ಟಣ, ಮೈಸೂರು, ಚಿಕ್ಕಬಳ್ಳಾಪುರ ಮಾರುಕಟ್ಟೆಗಳಲ್ಲಿ ಭಾಗಶಃ ಇ-ಹಣ ಪಾವತಿ ಮಾಡಲಾಗುತ್ತಿದ್ದು, ಉಳಿದ ಮಾರುಕಟ್ಟೆಗಳಲ್ಲಿ ಶೀಘ್ರದಲ್ಲೇ ಇ-ಹಣ ಪಾವತಿಯನ್ನು ಅನುಷ್ಠಾನಗೊಳಿಸಲಾಗುವುದು. |

ಸಂಖ್ಯೆ:ರೇಷ್ಮೆ 22 ರೇಕೃವಿ 2022

**(ಡಾ. ನಾರಾಯಣ ಗೌಡ)**
**ರೇಷ್ಮೆ ಹಾಗೂ ಯುವ ಸಬಲೀಕರಣ**
**ಮತ್ತು ಕ್ರೀಡಾ ಸಚಿವರು**